**ಪ್ರಧಾನ ಸಿವಿಲ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ ಚಿಂಚೋಳಿ**

**ಸಿ.ಸಿ. ನಂ. 274/2018**

| | | | |
|---|---|---|---|
| **ಹೆಸರು** | : | **ಪ್ರಭು** | **ಚಾ.ಸಾ. 16** |
| **ತಂದೆಯ ಹೆಸರು** | : | **ರಾಮಭಟ್ಟ** | **ಪ್ರಾ.ಸಾ. 12** |
| **ವಯಸ್ಸು** | : | **54 ವರ್ಷ** | **ದಿನಾಂಕಃ 17-07-2025** |
| **ಉದ್ಯೋಗ** | : | **ಹೋಟೆಲ ಕೆಲಸ** | |
| **ವಾಸಸ್ಥಳ** | : | **ಚಂದಾಪುರ** | |

**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರಿಂದಃ**

ಈ ಪ್ರಕರಣದ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲ. ನಾನು ಪೋಲಿರಿಗೆ ಯಾವುದೇ ಹೇಳಿಕೆ ನೀಡಿಲ್ಲ.

(ಈ ಹಂತದಲ್ಲಿ ತನಿಖಾಧಿಕಾರಿಯವರ ಮುಂದೆ ಸಲ್ಲಿಸಿರುವ ಹೇಳಿಕೆಗೆ ಈ ಸಾಕ್ಷಿ ಸಂಪೂರ್ಣ ಪ್ರತಿಕೂಲ ಸಾಕ್ಷ್ಯ ನುಡಿಯುತ್ತಿದ್ದು, ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ಕೊಡುವಂತೆ ಸ.ಸ.ಅ.ರವರು ಅನುಮತಿ ಕೋರುತ್ತಾರೆ. ಸಾಕ್ಷಿಯ ಹೇಳಿಕೆಯನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.)

**ಪಾಟೀ ಸವಾಲುಃ ಸಹಾಯಕ ಸರಕಾರಿ ಅಭಿಯೋಜಕರಿಂದಃ**

ನಾನು ದುರ್ಗಾ ಭವನ ಹೋಟೆಲಿನ ಮಾಲೀಕನಾಗಿರುತ್ತೇನೆ ಎಂದರೆ ಸರಿ. ದಿನಾಂಕ 11-07-2014 ರಂದು ಒಟ್ಟು 50 ಜನ ಶಿಬಿರಾರ್ಥಿಗಳು ತಾಲ್ಲೂಕ ಪಂಚಾಯಿತಿಯ ತರಬೇತಿಗಾಗಿ ನಾನು ಊಟ ಮತ್ತು ಉಪಹಾರ ಪೂರೈಸಿರುತ್ತೇನೆ ಎಂದರೆ ಸಾಕ್ಷಿ ಆಗಾಗ ಅವರು ನಮ್ಮಿಂದ ಪಾರ್ಸೆಲ್ ತೆಗೆದುಕೊಳ್ಳುತ್ತಾರೆ ಎಂದು ನುಡಿಯುತ್ತಾರೆ. ಅದಕ್ಕೆ ಒಟ್ಟು ಬಿಲ್ ರೂ. 11840/- ಆಗಿರುತ್ತದೆ ಎಂದರೆ ಸರಿಯಲ್ಲ. ಅದರ ಬಿಲ್‌ನ್ನು ಸಹ ನೀಡಿರುತ್ತೇನೆ ಎಂದರೆ ಸರಿಯಲ್ಲ. ಈಗ ನೋಡುತ್ತಿರುವ ರಸೀದಿ ನಾನು ನೀಡಿಲ್ಲ. ಸಾಕ್ಷಿ ಅಲ್ಲಗಳೆದ ರಸೀದಿಯನ್ನು ನಿಪಿ-26 ಎಂದು ಗುರುತಿಸಲಾಯಿತು. ನಿಪಿ-26 ರ ಮೇಲೆ ನನ್ನ ಹೋಟೆಲಿನ ಸೀಲ್ ಮತ್ತು ನನ್ನ ಸಹಿಗಳು ಇದೆ ಎಂದರೆ ಸರಿಯಲ್ಲ. ಸಾಕ್ಷಿ ಅಲ್ಲಗಳೆದ ಸಹಿಗಳನ್ನು ನಿಪಿ-26(ಎ) ಮತ್ತು 26(ಬಿ) ಎಂದು ಗುರುತಿಸಲಾಯಿತು. ಈ ರೀತಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನನ್ನ ಹೆಸರು ರಾಘವೇಂದ್ರ ಎಂದು ನುಡಿಯುತ್ತಾರೆ.

ಸಾಕ್ಷಿ ನೀಡಿದ್ದಾರೆ ಎನ್ನಲಾದ ದಿನಾಂಕ 05-06-2017 ರ ಹೇಳಿಕೆಯಲ್ಲಿರುವ ದಿನಾಂಕ 30-07-2014 ರ ಕೃಷ್ಣ ಗ್ರಾಮೀಣ ಬ್ಯಾಂಕ------------ ಎಂದು ತಾಲ್ಲೂಕ ಪಂಚಾಯತ ಕಾರ್ಯಲಯದಲ್ಲಿ ದ್ವಿತೀಯ ದರ್ಜೆ ಸಹಾಯಕರಾದ ಶ್ರೀ ರಮೇಶ ರಾಠೋಡರವರಿಂದ ಗೊತ್ತಾಗಿರುತ್ತದೆ ಕೇಳಿದಾಗ ಸಾಕ್ಷಿ ಇಲ್ಲ ಎಂದು

ನುಡಿಯುತ್ತಾರೆ. ಸಾಕ್ಷಿ ಅಲ್ಲಗಳೆದ ಹೇಳಿಕೆಯನ್ನು ನಿಪಿ-27 ಎಂದು ಗುರುತಿಸಲಾಯಿತು. ಈ ರೀತಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಯ ಮಾತು ಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿ ಪರವಾಗಿ ಶ್ರೀ JPA ವಕೀಲರಿಂದಃ** ಇಲ್ಲಾ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

**ಪ್ರಧಾನ ಪ್ರ.ದ.ನ್ಯಾ.ದಂ. ಚಿಂಚೋಳಿ**

ರಿಂದ ರವರೆಗೆ ನಾನು ಪೋಲಿಸ ಠಾಣೆಯಲ್ಲಿ ಮುಖ್ಯಪೇದೆಯಾಗಿ ಕಾರ್ಯನಿರ್ವಹಿಸಿದ್ದೇನೆ.

ನ್ಯಾಯಾಲಯದ ಮುಂದೆ ಇರುವ ಆರೋಪಿ ನನಗೆ ಗೊತ್ತಿಲ್ಲ. ಆರೋಪಿಗೆ ನಾನು ಈ ಮೊದಲು ನೋಡಿಲ್ಲ.

ಈ ದಿನ ನ್ಯಾಯಾಲಯದ ಮುಂದೆ ಹಾಜರಿರುವ ಆರೋಪಿ ನನಗೆ ಗೊತ್ತು, ಅವರು ನಮ್ಮ ಊರಿನವರು.

ಈಗ ನೋಡುತ್ತಿರುವ ನಿಪಿ-1 ರಲ್ಲಿ ನನ್ನ ಸಹಿ ಇದೆ. ನನ್ನ ಸಹಿಯನ್ನು ನಿಪಿ-1(ಬಿ) ಎಂದು ಗುರುತಿಸಲಾಯಿತು.

ಈಗ ನೋಡುತ್ತಿರುವ ನಿಪಿ-3 ಮತ್ತು 4 ರ ದಾಖಲೆಗಳಲ್ಲಿ ನನ್ನ ಸಹಿಗಳು ಇದೆ. ನನ್ನ ಸಹಿಗಳನ್ನು ನಿಪಿ-3(ಬಿ) ಮತ್ತು ನಿಪಿ-4(ಬಿ) ಎಂದು ಗುರುತಿಸಲಾಯಿತು.

ಈಗ ನೋಡುತ್ತಿರುವ ದೂರು ನಾನೇ ನೀಡಿದ್ದು, ಸದರಿ ದೂರನ್ನು ನಿಪಿ-3 ಎಂದು ಮತ್ತು ಅದರಲ್ಲಿರುವ ನನ್ನ ಸಹಿಯನ್ನು ನಿಪಿ-3(ಎ) ಎಂದು ಗುರುತಿಸಲಾಯಿತು.

ನಾನು ಯಾವುದೇ ಜಗಳ ನೋಡಿಲ್ಲ. ಪೋಲಿಸರಿಗೆ ನಾನು ಯಾವುದೇ ಹೇಳಿಕೆ ನೀಡಿಲ್ಲ ಮತ್ತು ಅವರು ನನಗೆ ವಿಚಾರಣೆ ಮಾಡಿಲ್ಲ.

ಈ ರೀತಿ ನಾನು ಪೋಲಿಸರಿಗೆ ಹೇಳಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿ ಅಲ್ಲಗಳೆದ ಹೇಳಿಕೆಯನ್ನು ನಿಪಿ-18 ಎಂದು ಗುರುತಿಸಲಾಯಿತು. ಈ ರೀತಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಎಲ್ಲಾ ಗೊತ್ತಿದ್ದರೂ ಆರೋಪಿಯ ಮಾತು ಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಯಾವುದೇ ಘಟನೆ ಆಗದೇ ಇದ್ದರೂ ಸಹ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯವಿಚಾರಣೆಯಲ್ಲಿರುವ ಸಂಗತಿಗಳು ಸುಳ್ಳು ಎಂದರೆ ಸರಿಯಲ್ಲ.

ಪೋಲಿಸರು ಬಂದು ಸಹಿ ಮಾಡು ಎಂದು ಹೇಳಿದ್ದಕ್ಕೆ ಸಹಿ ಮಾಡಿದ್ದೇನೆ. ನಾನು ನಿಪಿ-2 ಮತ್ತು 3 ರ ಸಂಗತಿಗಳನ್ನು ಓದಿಲ್ಲ ಮತ್ತು ಪೋಲಿಸರು ನನಗೆ ಸದರಿ ಸಂಗತಿಗಳನ್ನು ಓದಿ ಹೇಳಿಲ್ಲ. ಪೋಲಿಸರು ನನಗೆ ಯಾವುದೇ ಸ್ಥಳಕ್ಕೆ ಕರೆದುಕೊಂಡು ಹೋಗಿಲ್ಲ.

ಪೋಲಿಸರು ಸಹಿ ಮಾಡು ಎಂದು ಹೇಳಿದ್ದಕ್ಕೆ ಸಹಿ ಮಾಡಿದ್ದೇನೆ. ಪೋಲಿಸರು ನನ್ನ ಸಮಕ್ಷಮ ಪಂಚನಾಮೆ ಮಾಡಿಲ್ಲ ಎಂದರೆ ಸರಿ.

ಪೋಲಿಸರು ನನಗೆ ಯಾವುದೇ ಸ್ಥಳಕ್ಕೆ ಕರೆದುಕೊಂಡು ಹೋಗಿಲ್ಲ ಮತ್ತು ನನ್ನ ಸಮಕ್ಷಮ ಯಾವುದೇ ವಸ್ತು ಜಪ್ತಿ ಮಾಡಿಲ್ಲ.

ಈಗ ನೋಡುತ್ತಿರುವ ಭಾವಚಿತ್ರದಲ್ಲಿ ನಾನು ಇದ್ದೇನೆ. ಸದರಿ ಭಾವಚಿತ್ರವನ್ನು ನಿಪಿ-1 ಎಂದು ಗುರುತಿಸಲಾಯಿತು.